# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 146 /2022

P.W : 23

C.W: 27

**ದಿನಾಂಕ 07.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| **ಹೆಸರು** | : | ಮಮತಾ ಎಂ |
| **ಗಂಡನ ಹೆಸರು** | : | ಚಂದ್ರು ಎಂ.ವಿ.. |
| **ವಯಸ್ಸು** | : | 39 ವರ್ಷ |
| **ವೃತ್ತಿ** | : | ತಹಶೀಲ್ದಾರ್, Grade1 |
| **ವಾಸಸ್ಥಳ** | : | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಶಿರಾದಲ್ಲಿ ಅಕ್ಟೋಬರ್ 2020 ರಿಂದ 2023 ರವರೆಗೆ ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸಿರುತ್ತೇನೆ.

ದಿ. 02.06.2022 ರಂದು ಮಧುಗಿರಿ ಉಪ ವಿಭಾಗಾಧಿಕಾರಿಗಳು ನನಗೆ ಪ್ರಕರಣ ಸಂಖ್ಯೆ 104/2022 ಶಿರಾ ಪೋಲೀಸ್ ಠಾಣೆ ಇದರಲ್ಲಿ ರವಿಚಂದ್ರ ನಾಯಕ್ ಬಿನ್ ರಾಗ್ಯ ನಾಯಕ್ ರವರ ಮೃತ ದೇಹವನ್ನು ಭೂಮಿಯಿಂದ ಹೊರ ತೆಗೆಯಲು ನನಗೆ ಅಧಿಕಾರ ಪ್ರತ್ಯ್ರೋಜನೆ ಮಾಡಿದ್ದರು. ಅದರಂತೆ ನಾನು ದಿ.03.06.2022 ರಂದು ಪ್ರಕರಣದ ಮೃತ ರವಿಚಂದ್ರ ನಾಯಕ ಬಿನ್ ರಾಗ್ಯ ನಾಯಕ, 38 ವರ್ಷ, ಲಂಬಾಣಿ ಜನಾಂಗ ಕೂಲಿ ಕೆಲಸ, ಕಮಲನಾಯಕನ ತಾಂಡ್ಯ, ಬುಕ್ಕಾ ಪಟ್ಟಣ ಹೋಬಳಿ, ಶಿರಾ ತಾಲ್ಲೂಕು ರವರ ಕೊಳೆತ ಮೃತ ದೇಹದ ಮೇಲೆ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಬುಕ್ಕಾ ಪಟ್ಟಣ ಹೋಬಳಿ, ಕಮಲನಾಯಕನ ತಾಂಡ್ಯ ಗ್ರಾಮದಲ್ಲಿ ಆರೋಪಿ ರಾಜನಾಯಕ ಬಿನ್ ರಾಗ್ಯ ನಾಯಕ ರವರ ಪಂಚಾಯಿತಿ ಖಾತೆ ನಂಬರ್ 129 ರಲ್ಲಿ ಖಾಲಿ ನಿವೇಶನದಲ್ಲಿರುವ ಪಾಯದ ಮೇಲೆ ಕಲಂ.176 ಸಿ.ಆರ್.ಪಿ.ಸಿ ರೀತ್ಯಾ ಶವ ತನಿಖೆಯನ್ನು ಕೈಗೊಂಡಿರುತ್ತೇನೆ.

ಶವ ತನಿಖೆ ವೇಳೆ ಚಾ.ಸಾ.7, ಚಾ.ಸಾ.8, ಚಾ.ಸಾ.9 ರವರನ್ನು ಪಂಚಾಯ್ತಿದಾರರಾಗಿ ಸಹಕರಿಸಲು ಕೋರಿರುತ್ತೇನೆ. ಶವ ತನಿಖೆಯ ವೇಳೆ ಮೃತನ ಹೆಸರು ರವಿಚಂದ್ರ ನಾಯಕ್ ಬಿನ್ ರಾಗ್ಯ ನಾಯಕ, 38 ವರ್ಷ, ಕೂಲಿ ಕೆಲಸ, ಕಮಲನಾಯಕನ ತಾಂಡ್ಯ, ರವರ ಶವ ತನಿಖೆಯನ್ನು ಆ ದಿನ ಮಧ್ಯಾಹ್ನ 01.00 ಗಂಟೆಗೆ ಪ್ರಾರಂಬಿಸಿರುತ್ತೇನೆ. ಮೃತನ ಲಾಶ್ ನ್ನು ಗಮನಿಸಿದಾಗ ಶರೀರವು ಪೂರಾ ಕೊಳೆತು ಮೂಳೆಗಳು ಮಾತ್ರ ಇದ್ದಿದ್ದು ಕಂಡು ಬಂತು, ಆತನ ಎತ್ತರ, ಬಣ್ಣ, ಚಹರೆಗಳು ಗುರುತು ದೊರೆಕಿರುವುದಿಲ್ಲ. ಲಾಶ್ ಆರೋಪಿ ನಂ.1 ರಾಜನಾಯಕರವರ ಖಾಲಿ ನಿವೇಶನದ ಪಾಯದಲ್ಲಿ ದೊರೆತಿದ್ದು, ಆತನ ಮೈಮೇಲೆ ಯಾವುದೇ ಗಾಯಗಳ ಗುರುತು ಕೊಳೆತು ಹೋಗಿದ್ದರಿಂದ ಕಂಡು ಬಂದಿರುವುದಿಲ್ಲ. ಆತನ ಮೈಮೇಲೆ ಕಪ್ಪು ಬಣ್ಣದ ಪ್ಯಾಂಟ್, ಕೆಂಪು ಮತ್ತು ಬಿಳಿ ಬಣ್ಣದ ಪಟ್ಟಿಯ ತುಂಬು ತೋಳಿನ ಶರ್ಟ್ , ಕಾಫಿ ಬಣ್ಣದ ಒಳ ಉಡುಪು, ಕೆಂಪು ಬಣ್ಣದ ಒಂದು ಉಡಿದಾರ, ಕುತ್ತಿಗೆಯಲ್ಲಿ ಕೆಂಪು ಮತ್ತು ಬಿಳಿ ಬಣ್ಣದ ದಾರವಿದ್ದು, ಬಟ್ಟೆಗಳನ್ನು ಮೃತನ ಮೈಮೇಲೆ ಬಿಟ್ಟು, ಪಿಎಂ ಸಮಯದಲ್ಲಿ ವೈದ್ಯರಿಂದ ತೆಗೆಸಿಕೊಳ್ಳುವಂತೆ ಹೇಳಿ ಸಿಬ್ಬಂದಿ ಪಿ.ಸಿ.728 ಉಮೇಶ್ ನಾಯಕರವರಿಗೆ ಸೂಚಿಸಿದೆನು. ಶವ ತನಿಖೆಯನ್ನು ಆ ದಿನ ಮಧ್ಯಾಹ್ನ 03.00 ಗಂಟೆಯವರೆಗೆ ಕೈಗೊಂಡಿರುತ್ತೇನೆ. ಶವವನ್ನು ಗಮನಿಸಿದಾಗ ಅದನ್ನು ಕೆಂಪು ಮತ್ತು ಹಳದಿ ಬಣ್ಣದ ಬೆಡ್ ಶೀಟ್ ನಲ್ಲಿ ಹಾಕಿ ಊತಿಟ್ಟಿರುವುದು ಕಂಡು ಬಂತು. ಆರೋಪಿ ನಂ.1 ರವರು ಮೃತನ ಕುತ್ತಿಗೆಯ ಮೇಲೆ ಕಾಲು ಇಟ್ಟು, ತುಳಿದು ಹಿಂಸೆಯಿಂದ ಕೊಲೆ ಮಾಡಿರುವ ಬಗ್ಗೆ ನನಗೆ ಶವ ತನಿಖೆ ವೇಳೆ ಕಂಡು ಬಂತು. ಸ್ಥಳದಲ್ಲಿ ನಾನು ಮೃತನ ದೇಹವನ್ನು ಗಮನಿಸಿದಾಗ ಮೂಳೆಗಳು ಇದ್ದುದು ಕಂಡು ಬಂತು. ಈ ಬಗ್ಗೆ ನಾನು ಶವ ತನಿಖಾ ವರದಿಯನ್ನು ನಿ.ಪಿ.11 ರಂತೆ ಸ್ಥಳದಲ್ಲಿ ತಯಾರಿಸಿದ್ದೇನೆ. ನಿ.ಪಿ.11 ರ ಸಮಯದಲ್ಲಿ ಚಾ.ಸಾ.10, ಚಾ.ಸಾ.11, ಚಾ.ಸಾ.12, ಕೃಷ್ಣಾ ನಾಯಕ ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ. ಸಾಕ್ಷಿ ನಿ.ಪಿ.11 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.11(ಸಿ) ಯಿಂದ 11(ಹೆಚ್) ಎಂದು ಗುರತಿಸಲಾಯಿತು. ಮೃತನ ಮೈಮೇಲಿದ್ದ ಬಟ್ಟೆಗಳನ್ನು ಹಾಗೂ ಮೂಳೆಗಳನ್ನು ನಾನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿ.ಪಿ.17 ಮತ್ತು 18 ರಲ್ಲಿರುವ ಮೃತನ ಲ್ಯಾಶ್ ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಮೃತನಿಗೆ ಸಂಬಂದಿಸಿದ ಹಾಜರುಪಡಿಸಿರುವ ಮು.ಮಾ.1 ರಿಂದ 6 ಮತ್ತು 12 ರಲ್ಲಿರುವ ಮೂಳೆಗಳನ್ನು ಸಾಕ್ಷಿ ನೋಡಿ

ಗುರುತಿಸಿರುತ್ತಾರೆ. ನಾನು ದಿ.03.06.2022 ರಂದು ಸ್ಥಳದಲ್ಲಿ ಶವವನ್ನು ಹೊರ ತೆಗೆಯುವ ವೇಳೆ ಪಂಚನಾಮೆಯನ್ನು ಮಧ್ಯಾಹ್ನ 12.10 ರಿಂದ 12.50 ರವರೆಗೆ ಜರುಗಿಸಿರುತ್ತೇನೆ. ಆ ವೇಳೆ ರಂಗನಾಥಪ್ಪ, ಗೋಪಾಲ್ ಬಜಂತ್ರಿ ಎಂಬ ಪಂಚ ಸಾಕ್ಷಿದಾರರಾಗಿದ್ದು ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮತ್ತು ವಿಸಿ ಮೂಲಕ ಹಾಜರುಪಡಿಸಿದ್ದ 1 ನೇ ಅರೋಪಿ ಸಹಾ ಸ್ಥಳದಲ್ಲಿ ಹಾಜರಿದ್ದರು. ಸಾಕ್ಷಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿ.ಪಿ.14 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.14(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ .ಸಿ.ಡಿ.ಸಿ. ವಕೀಲರಿಂದ**

ಹೆಣ ತೆಗೆಸಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ. ಎ.ಸಿ ರವರು ನನಗೆ ಅಧಿಕಾರ ಪತ್ರವನ್ನು ಎಷ್ಟೊತ್ತಿಗೆ ಕೊಟ್ಟಿದ್ದಾರೆ ಎಂದು ನನಗೆ ಸಮಯ ಹೇಳಲಾಗುವುದಿಲ್ಲ. ಆ ಅಧಿಕಾರ ಪತ್ರವನ್ನು ನಾನು ವೈಯಕ್ತಿಕವಾಗಿ ತನಿಖಾಧಿಕಾರಿಗೆ ಕೊಟ್ಟಿಲ್ಲ . ಆದರೆ ಎಸಿ ರವರ ಕಡೆಯಿಂದ ಹೋಗಿರುತ್ತದೆ. ಸ್ಥಳದಲ್ಲಿ ಸಾಕ್ಷಿದಾರರು ಮತ್ತು ರಕ್ತ ಸಂಬಂಧಿಗಳು ಸರ್ಕಾರಿ ನೌಕರರಾದ ಪಂಚರು ಮೂರು ಜನ ಮತ್ತು ಪೊಲೀಸ್ ಸಿಬ್ಬಂದಿಗಳು ಇದ್ದರು. ನಿ.ಪಿ.11 ಮತ್ತು 14 ನ್ನು ನಮ್ಮ ಕೇಸ್ ವರ್ಕ್ ರ್ ನಿಂದ ತಯಾರಿಸಿರುತ್ತೇವೆ. ಹೇಳಿಕೆಗಳನ್ನು ನನ್ನ ನಿರ್ದೇಶನದ ಮೇರೆಗೆ ನನ್ನ ಸಿಬ್ಬಂದಿಗಳ ಮುಖಾಂತರ ಟೈಪ್ ಮಾಡಿಸಿರುತ್ತೇವೆ. ಸಿಬ್ಬಂದಿರವರ ಸಹಿಯನ್ನು ತೆಗೆದುಕೊಂಡಿಲ್ಲ. ಶವ ತನಿಖೆ ಕಾಲಕ್ಕೆ ಮೃತನ ಕುತ್ತಿಗೆ ಮೇಲೆ 1 ನೇ ಆರೋಪಿ ಕಾಲಿನಿಂದ ತುಳಿದು, ಹಿಂಸೆ ನೀಡಿ, ಕೊಲೆ ಮಾಡಿದ ಬಗ್ಗೆ ನನಗೆ ಕಂಡು ಬಂತು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.17 ಮತ್ತು 18 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.11 ಮತ್ತು 14 ನ್ನು ಪೋಲೀಸರ ಕೋರಿಕೆಯ ಮೇರೆಗೆ ಸುಳ್ಳಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಸ್ಥಳದಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಶವ ತನಿಖೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಿಂದ 6 ಮತ್ತು 12 ನ್ನು ಇದೇ ಬಾರಿ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದೇನೆ. ಎಂದರೆ ಸರಿಯಲ್ಲ. ನಮ್ಮ ಎ.ಸಿ ರವರು ನನಗೆ ಯಾವುದೇ ಅದೇಶ

ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ಮತ್ತು 14 ರ ಮೇಲೆ ಅದನ್ನು ಬರೆದಿರುವ ಸಿಬ್ಬಂದಿರುವ ಸಹಿ ಪಡೆದುಕೊಂಡಿಲ್ಲ ಎಂದರೆ ಸರಿ .

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.